**SC No. 313/2018**
**C/w 160/2022**
**C/w 24/2023**

<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>
<u>ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು</u>

**SC No. 313/2018**
**C/w S.C. No. 160/2022**
**C/w S.C. No. 24/2023**

| ಸಾಕ್ಷಿಯ ಹೆಸರು | ಶ್ರೀ.ಹುಕುಮ್ ಸಿಂಗ್ | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ಜಬ್ಬರ್ ಸಿಂಗ್ | 12 | 5 |
| ವಯಸ್ಸು | 42 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **09.06.2026.** | |
| ಉದ್ಯೋಗ | ಮೆಡಿಕಲ್ ಶಾಪ್ | | |
| ವಾಸ ಸ್ಥಳ | ವೈಟ್ ಫೀಲ್ಡ್ | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ನನಗೆ ಸೇರಿದ ರಾಮ್ ದೇವ್ ಮೇಡಿಕಲ್ ವರ್ತೂರಿನ ಕೋಡಿಯ ಬಳಿ ಇದೆ. ತ್ರೀವೇಣಿ ಬೇಕರಿ ನಮ್ಮ ಅಂಗಡಿಯ ಬಳಿ ಇದೆ. ನಮ್ಮ ಅಂಗಡಿಯನ್ನು ಬೆಳಗ್ಗೆ 10.00 ರಿಂದ ರಾತ್ರಿ 10.00 ರವರೆಗೆ ತೆಗೆದಿರುತ್ತೇವೆ. ನಾನು ನಮ್ಮ ನಮ್ಮ ಸಿಬ್ಬಂದಿ ಅಂಗಡಿಯಲ್ಲಿ ಇರುತ್ತೇವೆ. ಆರೋಪಿತರನ್ನು ನೋಡಿಲ್ಲ. ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ. ನನ್ನ ಸಮಕ್ಷಮ ಯಾವುದೇ ಕೊಲೆ ನಡೆದಿಲ್ಲ. ದಿನಾಂಕ 21.01.2017 ರಂದು ಪೊಲೀಸರು ಬಂದು CCTV ದೃಶ್ಯವಳಿಗಳನ್ನು ತೆಗೆದುಕೊಂಡರು. ಈಗ ನನಗ ತೋರಿಸಿದ ಮಹಜರ್ ನಲ್ಲಿ ನನ್ನ ಸಹಿ ಇದ್ದು ಅದನ್ನು ನಿಶಾನೆ.ಪಿ. 6 ಎಂದು ಸಾಕ್ಷಿಯ ಸಹಿಯನ್ನು ನಿಶಾನೆ.ಪಿ. 6 (ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಸಿ.ಡಿ.ಯನ್ನು ನಾನು ನೋಡಿಲ್ಲ, ಆ ದಿನ ಪೊಲೀಸರು ಸದರಿ ಸಿ.ಡಿ.ಯನ್ನು ತೋರಿಸಿಲ್ಲ. ನಿಶಾನೆ.ಪಿ. 6 ರ ಒಕ್ಕಣೆ ಗೊತ್ತಿಲ್ಲ, ಕಾರಣ ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ಪೊಲೀಸರು ನನ್ನ ಹೇಳಿಕೆ ಮಾಡಿಕೊಂಡಿಲ್ಲ. ಈಗ ತೋರಿಸಿದ ಸಿ.ಡಿ.ಯ ವಿಡಿಯೋದಲ್ಲಿ ಘಟನೆ ಬಗ್ಗೆ ದೃಶ್ಯವಳಿಗಳು ಇರುತ್ತವೆ ಮತುತ ಸಾಕ್ಷಿ ಆ ದಿನ ಅಂಗಡಿಯಲ್ಲಿ ಇದ್ದೆ ಎಂದು ನುಡಿಯುತ್ತಾರೆ, ಆದರೆ ಸದರಿ ಸಿ.ಡಿ.ಯನ್ನು ಗುರುತಿಸುವ ಬಗ್ಗೆ ಆರೋಪಿತರ ಪರ ಕಲಂ. 65 ಬಿ ದೃಡೀಕರಣ ಪತ್ರ ಇಲ್ಲದೇ ಇರುವುದರಿಂದ ವಕೀಲರು ಆಕ್ಷೇಪಣೆ ಮಾಡಿರುತ್ತಾರೆ. ಆರೋಪಿತರ ಪರ ವಕೀಲರ ತಕರಾರಿಗೆ ಒಳಪಟ್ಟು ಹಾಗೂ ಕಲಂ. 65 ಬಿ ದೃಡೀಕರಣ

**SC No. 313/2018**
**C/w 160/2022**
**C/w 24/2023**

ಪತ್ರ ಹಾಜರು ಪಡಿಸುವ ನಿಬಂದನೆಗೆ ಒಳಪಟ್ಟು ಸದರಿ ಸಿ.ಡಿ.ಯನ್ನು ಮು.ಮಾ. 1 ಎಂದು ಗುರುತಿಸಲಾಯಿತು. ನಾನು ಘಟನೆಯನ್ನು ನೋಡಿದರೂ ಆರೋಪಿತರಿಗೆ ಭಯಪಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

(ಈ ಸಾಕ್ಷಿಯನ್ನು ಅಭಿಯೋಜಕರು ಪ್ರತಿ ಕೂಲ ಸಾಕ್ಷಿ ಅಂತ ಪರಿಗಣಿಸಲು ಅನುಮತಿ ಕೇಳಿದ್ದು ಸಾಕ್ಷಿಯು ನೀಡಿದ್ದ ವ್ಯತಿರಿಕ್ತ ಹೇಳಿಕೆಯನ್ನು ಗಣನೆಗೆ ತೆಗೆದುಕೊಂಡು ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ

ದಿನಾಂಕ 12.01.2017 ರಂದು ವರ್ತೂರಿನ ಕೋಡಿಯ ಬಳಿ ನನ್ನ ಮೆಡಿಕಲ್ ಮುಂಭಾಗ ಪೊಲೀಸರು ಮಹಜರ್ ಅನ್ನು ಮಾಡಿ ಸಿ.ಡಿ.ಯನ್ನು ವಶಕ್ಕ ಪಡೆದರು ಎಂದರೆ ಸರಿ ಅಲ್ಲ. ಆ ಸಮಯದಲ್ಲಿ ನನ್ನ ಜೊತೆಗೆ ಜಮೀರ್ ಷರೀಫ್ ಇದ್ದರು ಎಂದರೆ ಸರಿ ಅಲ್ಲ. ಪೋಲೀಸರು ಓದಿ ಹೇಳಿದ ನಂತರ ಸಹಿ ಮಾಡಿದ್ದೇನೆ ಎಂದರೆ ಸರಿ ಅಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಸಾಕ್ಷಿ ಹೇಳಿಕೆಯ ಭಾಗವನ್ನು ಓದಿ ತೋರಿಸಿದಾಗ ಸಾಕ್ಷಿ ನಿರಾಕರಿಸಿದ್ದರಿಂದ ಸದರಿ ಹೇಳಿಕೆಯ ಭಾಗವನ್ನು ನಿಶಾನೆ.ಪಿ. 7 ಎಂದು ಗುರುತಿಸಲಾಯಿತು. ಆರೋಪಿತರು ಹೆದರಿಸಿದರಿಂದ ಸುಳ್ಳು ಹೇಳುತ್ತಿದೇನೆ ಎಂದರೆ ಸರಿ ಅಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ : ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.